ಸಂಕೋಚದಿಂದ ಅಬ್ರಾಹಮ್‌ನ ಮಾವ–ಅತ್ತೆಗೆ ಫೋನ್ ಮಾಡಿದೆ. ಅತ್ತೆ ಫೋನ್ ಎತ್ತಿದರು, ‘ನಾನು ನ್ಯಾನ್ಸಿ ಮಾತನಾಡ್ತಿದ್ದೇನೆ, ಡೆನ್ಮಾರ್ಕ್‌ನಿಂದ’.

ನನ್ನ ಧ್ವನಿ ಕೇಳಿ ಅವರಿಗೆ ಆಶ್ಚರ್ಯವಾಯಿತು.

‘ನ್ಯಾನ್ಸಿ, ಏನಮ್ಮಾ ಇವತ್ತು ನೆನಪಾಯ್ತ?’

‘ಮೊಮ್ಬಾಸಾದಿಂದ ನನ್ನ ಗೆಳತಿ ಮಾರಿಯಾಳ ಫೋನ್ ಬಂದಿತ್ತು. ಫಾದರ್ ಡಿಸೋಜಾ, ಅಬ್ರಾಹಮ್‌ನನ್ನು ಚರ್ಚ್‌ನಿಂದ ಹೊರಹಾಕಿದರು ಅಂತ ಹೇಳಿದಳು...’

‘ನಾವೂ ಇದನ್ನೇ ಕೇಳ್ತಿದ್ದೇವೆ... ಅವನ ಕೆಟ್ಟ ಕೆಲಸಗಳು... ಅವನು ನಮ್ಮ ಮುಖಕ್ಕೆ ಮಸಿಯನ್ನು ಬಳಿದ. ಅವನ ವೀಸಾವನ್ನು ಇಲ್ಲಿ ಸ್ಪಾನ್ಸರ್ ಮಾಡಿಸಿ ನಾವೂ ತುಂಬಾ ಪಶ್ಚಾತ್ತಾಪ ಪಡುತ್ತಿದ್ದೇವೆ...’

ಮಾವ ಸಹ ಫೋನ್ ಬಳಿ ಬಂದರು. ಗಂಡ–ಹೆಂಡತಿ ಇಬ್ಬರೂ ಅಬ್ರಾಹಮ್‌ನನ್ನು ಮನಸಾರೆ ನಿಂದಿಸುತ್ತಿದ್ದರು. ನಾನು ಮೂಕಳಾಗಿ ನಿರ್ವಿಕಾರ ಭಾವನೆಯಿಂದ ಅವರ ಮಾತುಗಳನ್ನು ಕೇಳುತ್ತಿದ್ದೆ. ಅಬ್ರಾಹಮ್, ನನ್ನ ಕಳೆದುಹೋದ ನಿನ್ನೆಯಾಗಿದ್ದ. ಇಂದು ಅವನು ನನ್ನ ಸಮಸ್ಯೆಯಾಗಿರಲಿಲ್ಲ. ನನಗೆ ಜೋಶ್‌ನ ಚಿಂತೆ ಮಾತ್ರವಿತ್ತು.

‘ಅತ್ತೆ, ನೀವೇನು ಹೇಳ್ತೀರ...? ನಾನಲ್ಲಿಗೆ ಬರಲೇ?’

ನಾನು ಸಲಹೆ ಕೇಳಿದೆ.

‘ನೀನಿಲ್ಲಿಗೆ ಬಂದು ನಿನ್ನ ಮಗನನ್ನು ಕರೆದುಕೊಂಡು ಹೋಗು. ಅವನ ಅಪ್ಪ ಅವನನ್ನು ನೋಡಿಕೊಳ್ಳಲಾರ’ ಅತ್ತೆ ಸಲಹೆಯಿತ್ತರು.

ಆ ದಿನಗಳಲ್ಲಿ ನನ್ನ ಶಾಲೆಗೆ ಹತ್ತು ದಿನಗಳ ಈಸ್ಟರ್ ರಜವಿತ್ತು. ನಾನು ಇನ್ನೂ ನಾಲ್ಕು ದಿನಗಳ ರಜೆ ಪಡೆದು ಮೊಮ್ಬಾಸಾಕ್ಕೆ ಹೊರಟೆ.

ಮೌರೀನರ ಮನೆಯಲ್ಲಿ ಉಳಿದುಕೊಂಡೆ.

ಚರ್ಚ್ ಕೊಟ್ಟ ಮನೆಯನ್ನು ಅಬ್ರಾಹಮ್ ಖಾಲಿ ಮಾಡಬೇಕಾಯಿತು. ಅವನು ಮೊಮ್ಬಾಸಾವನ್ನೂ ಬಿಡಬೇಕಾಯಿತು. ಆದರೆ ಅವನು ಭಾರತಕ್ಕೆ ಮರಳಿ ಹೋಗಲಿಲ್ಲ. ಕೀನ್ಯಾದ ರಾಜಧಾನಿ ನೈರೋಬಿಗೆ ಹೋದ. ನಾನು ಜೋಶ್‌ನೊಂದಿಗೆ ಮೌರೀನರ ಮನೆಯಲ್ಲಿ ಹತ್ತು ದಿನಗಳಿದ್ದೆ. ಮೌರೀನರ ಪ್ರೀತಿ ಮನಸ್ಸನ್ನು ಸ್ಪರ್ಶಿಸಿತು. ಈ ಬಿರುಗಾಳಿಯನ್ನು ಹೊರತುಪಡಿಸಿಯೂ ಅವರೊಂದಿಗಿದ್ದದ್ದು ಮನಸ್ಸಿನ ಶಾಂತಿಗೆ ಕಾರಣವಾಯಿತು. ಅವರಿಂದ ಮಸಾಜಿನ ಹೊಸ ಹೊಸ ವಿಧಾನಗಳನ್ನು ಕಲಿತೆ. ಕೈ–ಕಾಲು, ಹೊಟ್ಟೆ, ಬೆನ್ನು, ಗಲ್ಲ, ಹಣೆ, ತಲೆ, ಕಣ್ಣುಗಳು, ಗದ್ದ ಮತ್ತು ಕೊರಳು ಹೀಗೆ ಶರೀರದ ಎಲ್ಲಾ ಭಾಗಗಳಿಗೆ ಮಸಾಜು ಮಾಡುವ ಯೋಗ್ಯ ವಿಧಾನಗಳನ್ನು ಕರಗತ ಮಾಡಿಕೊಂಡೆ. ಪ್ರೆಶರ್ ಪಾಯಿಂಟ್‌ಗಳ ಬಗ್ಗೆ ತಿಳಿದುಕೊಂಡೆ. ಎಳ್ಳೆಣ್ಣೆ, ತೆಂಗಿನೆಣ್ಣೆ, ಸಾಸಿವೆ ಎಣ್ಣೆ, ಆಲಿವ್ ಎಣ್ಣೆಗಳ ಆಯ್ಕೆಗಳ ಬಗ್ಗೆ ಮಾಹಿತಿಯನ್ನು ಪಡೆದೆ. ಬೆಣ್ಣೆ, ಹಾಲಿನ ಕೆನೆ, ಹಾಲಿನ ಉಪಯೋಗಗಳ ಬಗ್ಗೆ ತಿಳಿದೆ. ಅಲೋವೆರಾ ಜೂಸ್ ಮತ್ತು ಪ್ಯಾಕ್ ಮಾಡುವ ವಿಧಾನಗಳನ್ನು ಅರಿತೆ. ಔಷಧಗಳ ಪೋಟಲಿ ಮಾಡುವುದನ್ನು ಕಲಿತೆ. ಹೀಗೆ ಈ ಹತ್ತು ದಿನಗಳಲ್ಲಿ ಮೌರೀನರಿಂದ ಸಾಕಷ್ಟು ಕಲಿತೆ.

ಮೌರೀನರನ್ನು ಡೆನ್ಮಾರ್ಕ್‌ಗೆ ಬರಲು ಆಹ್ವಾನಿಸಿದೆ, ‘ನೀವು ತುಂಬಾ ದೇಶಗಳನ್ನು ಸುತ್ತಿದ್ದೀರಿ, ಆದರೆ ಸ್ಕ್ಯಾಂಡಿನೇವಿಯಾಕ್ಕೆ ಹೋಗಿಲ್ಲ. ನೀವು ನನ್ನೊಂದಿಗೆ ಡೆನ್ಮಾರ್ಕ್‌ಗೆ ಬನ್ನಿ’. ಅವರು ನಕ್ಕು ಹೇಳಿದರು, ‘ನನ್ನ ಮಕ್ಕಳು ನನ್ನನ್ನು ಅಮೆರಿಕಕ್ಕೆ ಕರೆಯುತ್ತಿರುತ್ತಾರೆ. ನನ್ನ ವೀಸಾ ಸ್ಪಾನ್ಸರ್ ಮಾಡಿಸುತ್ತೇವೆ ಅಂತ ಹೇಳ್ತಾರೆ. ನಮ್ಮೊಂದಿಗೇ ಇರಿ ಅಂತಲೂ ಒತ್ತಾಯ ಮಾಡ್ತಾರೆ. ಆದರೆ ನಾನು ನನ್ನ ದೇಶವನ್ನು ಬಿಟ್ಟು ಬೇರೆಲ್ಲೂ ಹೋಗಲು ಬಯಸಲ್ಲ. ನನ್ನ ದೇಶ ಪಾಪಾಸುಕಳ್ಳಿಯ ದೇಶವಾದಾಗ್ಯೂ, ನಾನಿಲ್ಲೇ ಇರಬೇಕು, ಇಲ್ಲಿಯೇ ಸಾಯಬೇಕು’.

‘ನೀವು ಪಾಪಾಸುಕಳ್ಳಿಯ ನಡುವೆ ಗುಲಾಬಿ ಯಂತಿದ್ದೀರಿ...’ ಎಂದು ಮೌರೀನರಿಗೆ ಹೇಳಿದೆ.

ಅವರು ನಕ್ಕರು.

ನಾನು ನನ್ನೆಲ್ಲಾ ಹಳೆಯ ಮಿತ್ರರನ್ನು ಭೇಟಿಯದೆ, ಹಳೆಯ ಶಾಲೆಗೆ ಹೋದೆ. ಜೋಶ್ ಬಗ್ಗೆ ಭಯವಿತ್ತು. ಒಂದು ವೇಳೆ ಅಬ್ರಾಹಮ್ ಮತ್ತೆ ನೆಲೆಯೂರದಿದ್ದರೆ, ಜೋಶ್‌ನ ಪರಿಸ್ಥಿತಿ ಏನು? ಅವನ ಭವಿಷ್ಯವೇನು?

ಪ್ರಸ್ತುತ ಅಬ್ರಾಹಮ್‌ಗೆ ಯಾವುದೇ ಮನೆ ಯಿರಲಿಲ್ಲ. ನಾನು ಜೋಶ್‌ನನ್ನು ನನ್ನೊಂದಿಗೆ ಕೋಪನಹೇಗನ್‌ಗೆ ಕರೆ ತಂದೆ. ನಾನು ಬೋಧಿಸು ತ್ತಿದ್ದ ಶಾಲೆಯ ಪ್ರಿನ್ಸಿಪಾಲ ವಿಲಿಯಮ್ ಥರಾನೆ ಅವರೊಂದಿಗೆ ಮಾತನಾಡಿದೆ. ಅವರು ಜೋಶ್‌ಗೆ ಎರಡೂವರೆ ತಿಂಗಳು ಬರಲು ಅನುಮತಿಯಿತ್ತರು. ಒಂದು ಕಾಲದಲ್ಲಿ ವಿಲಿಯಮ್ ಥರಾನೆಯವರು ಈ ಶಾಲೆಗೆ ಅಡಿಪಾಯ ಹಾಕಿದ್ದರು. ಅವರ ನೇತೃತ್ವದಲ್ಲಿ ಶಾಲೆ ತುಂಬಾ ಪ್ರಗತಿಯನ್ನು ಸಾಧಿಸಿತು.

‘ಶಿಕ್ಷಣ ಮಗುವಿನ ಜನ್ಮಸಿದ್ಧ ಹಕ್ಕು. ಮಗುವೊಂದು ಯಾವುದೋ ಕಾರಣದಿಂದ ಶಾಲೆಗೆ ಹೋಗದಿದ್ದರೆ, ಶಾಲೆಯೇ ಅವನ ಬಳಿಗೆ ಹೋಗಬೇಕು’ ಎಂದರು ವಿಲಿಯಮ್ ಥರಾನೆ.

ವಿಲಿಯಮ್ ಥರಾನೆ ವಾಸ್ತವವಾಗಿ ಓರ್ವ ಶಿಕ್ಷಣ ತಜ್ಞರಾಗಿದ್ದರು. ಅವರ ಬಗ್ಗೆ ನನ್ನ ಗೌರವ ಹೆಚ್ಚಿತು. ಈ ಜಗತ್ತು ಕೆಟ್ಟವರಿಂದ ತುಂಬಿದೆ, ಆದರೆ ಇಲ್ಲಿ ತುಂಬಾ ಜನ ಒಳ್ಳೆಯವರೂ ಇದ್ದಾರೆ, ಒಮ್ಮೊಮ್ಮೆ ಜೀವನದಲ್ಲಿ ಇಂಥ ಪ್ರಾಮಾಣಿಕರು ಭೇಟಿಯಾಗುತ್ತಾರೆ.

‘ನನಗೂ ಜೀವನದಲ್ಲಿ ಒಳ್ಳೆಯವರು ಸಿಕ್ಕಿದ್ದಾರೆ. ತೀರ್ಥಯಾತ್ರೆಯ ಸಂದರ್ಭದಲ್ಲಿ ನನಗೆ ಕವಾನ್ ಎಂಬ ಚೀನಿ ಮಹಿಳೆ ಭೇಟಿಯಾಗಿದ್ದಳು. ನಾನು ತುಂಬಾ ಹಸಿದಿದ್ದೆ. ಅವಳು ನನಗೆ ಆಹಾರವನ್ನು ಕೊಟ್ಟಿದ್ದಳು. ಓಹ್, ಈಗ ನೆನಪಾಯಿತು, ನಾನು ಅವಳಿಗೆ ‘ಥ್ಯಾಂಕ್ ಯೂ’ ಕಾರ್ಡ್ ಕಳುಹಿಸಬೇಕು...’

ಜೋಶ್‌ಗೆ ಮೂರು ತಿಂಗಳ ವೀಸಾ ಇತ್ತು. ಜೋಶ್‌ಗೆ ಡೆನ್ಮಾರ್ಕ್‌ನ ಪರ್ಮನೆಂಟ್ ರೆಸಿಡೆನ್ಸ್ ಕೊಡಿಸಲು ಮತ್ತೊಮ್ಮೆ ಪ್ರಯತ್ನಿಸಿದೆ. ಇಮಿಗ್ರೇಶನ್‌ಗೆ ಹೋಗಿ ಅಧಿಕಾರಿಗಳ ಎದುರು ಪ್ರಾರ್ಥಿಸಿದೆ, ಅಂಗಲಾಚಿದೆ, ‘ತಾಯಿಯನ್ನು ಮಗನಿಂದ ಬೇರೆ ಮಾಡಬೇಡಿ, ಇವನು ನನ್ನ ಶರೀರದಿಂದ ಹೊರ ಬಂದಿದ್ದಾನೆ, ನನ್ನಿಂದ ಬೇರೆಯಲ್ಲ’ ಎಂದೆ. ಆದರೆ ಅವರಿಗೆ ಏನೂ ಅನ್ನಿಸಲಿಲ್ಲ. ಸರ್ಕಾರಿ ನಿಯಮಗಳಲ್ಲಿ ಭಾವನೆಗಳಿಗೆ ಯಾವುದೇ ಮಹತ್ವವಿರುವುದಿಲ್ಲ. ಇಮಿಗ್ರೇಶನ್‌ನ ಕೌಂಟರ್‌ನಲ್ಲಿ ನಿಂತ ಮಹಿಳಾ ಸಿಬ್ಬಂದಿಯೊಬ್ಬಳು ನನ್ನನ್ನು ಗದರಿಸಿದಳು, ‘ನೀವು ಮಗನೊಂದಿಗೆ ಇರಲು ಬಯಸುವುದಾದರೆ, ಅವನೊಂದಿಗೆ ನೀವೇಕೆ ಆಫ್ರಿಕಾಕ್ಕೆ ಹೋಗಲ್ಲ? ನಿಮಗೇನು ಬೇಕೆಂದು ನೀವು ಆರಿಸಿಕೊಳ್ಳಬೇಕು’.

ನಾನು ನಿರುತ್ತರಳಾದೆ. ಮಗನ ಪರ್ಮನೆಂಟ್ ರೆಸಿಡೆನ್ಸಿಯ ಅರ್ಜಿ ಮತ್ತೊಮ್ಮೆ ತಿರಸ್ಕೃತಗೊಂಡಿತು. ಲಾರ್ಸ್ ತಟಸ್ಥನಾಗಿಯೇ ಇದ್ದ.

ಜೋಶ್ ಕೋಪನ್‌ಹೇಗನ್‌ನಲ್ಲಿ ನನ್ನೊಂದಿಗೆ ಮೂರು ತಿಂಗಳಿದ್ದು ನಂತರ ತನ್ನ ತಂದೆಯ ಬಳಿಗೆ ನೈರೋಬಿಗೆ ಹೊರಟುಹೋದ. ಅಲ್ಲಿ ಅಬ್ರಾಹಮ್ ಬಟ್ಟೆಗಳು ಮತ್ತು ಬ್ಯಾಗ್ಸ್‌ಗೆ ಸಂಬಂಧಿಸಿದ ಒಂದು ಟೆಕ್ಸ್‌ಟೈಲ್ ಬಿಸಿನೆಸ್ ಆರಂಭಿಸಿದ್ದ. ಬಿಸಿನೆಸ್‌ಗೆ ಹಾಕಲು ಅವನಿಗೆ ಹಣದ ಅವಶ್ಯಕತೆಯಿತ್ತು, ಅವನು ನನ್ನಲ್ಲಿ ಸಹಾಯವನ್ನು ಯಾಚಿಸಿದ. ನಾನೀಗ ಸಂಪಾದನೆ ಮಾಡುತ್ತಿದ್ದೆ. ಲಾರ್ಸ್ ಸಹ ನನಗೆ ಯಾವುದೇ ವಿಧದ ಆರ್ಥಿಕ ತೊಂದರೆಯನ್ನು ಕೊಡಲಿಲ್ಲ. ಒಮ್ಮೊಮ್ಮೆ ಅವನು ನನಗೆ ತನ್ನ ಬ್ಯಾಂಕಿನ ಕಾರ್ಡನ್ನೂ ಕೊಡುತ್ತಿದ್ದ; ನಿನಗೆ ಬೇಕಾದಷ್ಟು ಹಣವನ್ನು ನನ್ನ ಅಕೌಂಟಿನಿಂದ ತೆಗೆದುಕೊಂಡು ಖರ್ಚು ಮಾಡಬಹುದು ಎಂದೂ ಹೇಳುತ್ತಿದ್ದ.

ನಾನು ಅಬ್ರಾಹಮ್‌ಗೆ ಅವನ ಬಿಸಿನೆಸ್‌ಗೆ ಹಣವನ್ನು ಕಳುಹಿಸಿದೆ. ಅವನು ತನ್ನ ಮಗನ ತಂದೆಯಾಗಿದ್ದ. ಅವನು ಒಂದು ನೆಲೆ ಕಾಣುವುದು ಅವಶ್ಯಕವಾಗಿತ್ತು, ಅಲ್ಲದೆ ಅವನು ನಮ್ಮ ಹಿತವನ್ನು ಬಯಸುತ್ತಿದ್ದ. ನನ್ನಿಂದ ಎಷ್ಟು ಸಾಧ್ಯವೋ ಅಷ್ಟನ್ನೂ ಮಾಡಿದೆ ಎಂದು ನಾನು ಸಂತಸಪಟ್ಟೆ. ನನ್ನ ಬಗ್ಗೆ ಅವನ ವರ್ತನೆ ಮೃದುವಾಗುತ್ತಿತ್ತು.

***

ಜೋಶ್‌ನಿಂದ ಅಗಲುವುದು ನನಗೆ ಅತ್ಯಂತ ದುಃಖದ ಸಂಗತಿಯಾಗಿತ್ತು, ಆದರೆ ಮನಸ್ಸಿನಲ್ಲಿ, ಜೋಶುಆ ತನ್ನ ತಂದೆಯ ಬಳಿ ಬೆಳೆಯುತ್ತಿದ್ದಾನೆ, ನಾನು ಮತ್ತೆ ತಾಯಿಯಾಗುತ್ತೇನೆ ಎಂದು ನೆಮ್ಮದಿ ಯಿತ್ತು. ನನಗೆ ಎರಡನೆಯ ಮಗುವಾಗುವುದು. ಈಗ ನನ್ನ ವಯಸ್ಸಾದರೂ ಎಷ್ಟು? ಆದರೆ ವರ್ಷದ ನಂತರ ವರ್ಷಗಳು ಕಳೆದವು, ನಾನು ಗರ್ಭಿಣಿಯಾಗಲಿಲ್ಲ, ನಾವು ಯಾವುದೇ ಗರ್ಭ ನಿರೋಧಕಗಳನ್ನು ಉಪಯೋಗಿಸುತ್ತಲೂ ಇರಲಿಲ್ಲ. ಲಾರ್ಸ್‌ನ ಅಜ್ಜಿ ಗ್ರೇಥಾ ಮರಿಮಗನ ಮುಖವನ್ನು ನೋಡದೆಯೇ ಈ ಜಗತ್ತಿನಿಂದ ಹೊರಟುಹೋದಳು.

ನನ್ನಲ್ಲಿ ಈ ಬಂಜೆತನ ಏಕೆ ಬಂತು ಎಂದು ನನಗೆ ಅರ್ಥವಾಗುತ್ತಿರಲಿಲ್ಲ.

‘ಅವಳೂ ಇನ್ನಷ್ಟು ಮಕ್ಕಳನ್ನು ಬಯಸುತ್ತಿದ್ದಳು...’

‘ನೀನಾ?’

‘ಹೌದು.’

‘ನಾಲ್ಕು ಐವಿಎಫ್ ಫೇಲ್ ಆದವು...’ ಪಾಲ್ ಬಡಬಡಿಸಿದ.